


## ಹೆಬ್ಬಲಸಿನ ಸವಿನೋಡಿ

ಬೇಸಿಗೆಯ ದಿನಗಳಲ್ಲಿ ಮಲೆನಾಡಿನ ಹಸುರು ಕಾಡಿಗೆ ಹೆಜ್ಜೆ ಇಟ್ಟರೆ ವಿವಿಧ ಜಾತಿಯ ಕಾಡು ಹಣ್ಣುಗಳು ನಮ್ಮನ್ನು ಸ್ವಾಗತಿಸುತ್ತವೆ. ಅಂಥದ್ದರಲ್ಲಿ ಹುಳಿ ಸಿಹಿ ಮಿಶ್ರಿತ ಹೆಬ್ಬಲಸಿನ ಹಳದಿ ಬಣ್ಣದ ತೊಳೆ ಕಾಣದಿರದು. ತಿಂಗಳುಗಳ ಕಾಲ ಕಡವೆ, ಕಾಡುಕೋಣ, ಮಂಗಗಳಂತಹ ವನ್ಯ ಜೀವಿಗಳಿಗೆ ಆಹಾರ ಒದಗಿಸುವ ಈ ಹೆಬ್ಬಲಸಿನ ಹಣ್ಣುಗಳನ್ನು ಹೆಚ್ಚಾಗಿ ಮಂಗಗಳ ಕೈ ತಪ್ಪಿ ನೆಲಕ್ಕೆ ಉದುರಿದರೆ ಮಾತ್ರ ನಾವು ಅದರ ರುಚಿ ನೋಡಬಹುದು.

ತನ್ನದೇ ಆದ ವಿಶಿಷ್ಟ ವಿನ್ಯಾಸ ಗೋಲಾಕೃತಿ ಈ ಹಣ್ಣುಗಳ ರಸಭರಿತವಾದ ತೊಳೆಗಳಲ್ಲಿನ ಸ್ವಾದದಲ್ಲಿ ವಿಟಮಿನ್ ಅಂಶಗಳಿವೆ. ಮಣ್ಣಿಗೆ ಬೀಳುವ ಬೀಜಗಳು ಮೊದಲ ಮಳೆಗೆ ಪ್ರಸರಣಗೊಂಡು ಸಸ್ಯಾಭಿವೃದ್ಧಿಯಾಗುತ್ತದೆ. ಮುಗಿಲೆತ್ತರಕ್ಕೆ ಮುಖ ಮಾಡಿ ನಿಂತ ಹೆಬ್ಬಲಸು ಆಕಾಶದೆತ್ತರಕ್ಕೆ ಟೊಂಗೆ ವಿಸ್ತರಿಸಿಕೊಂಡು ನಿತ್ಯಹರಿದ್ವರ್ಣದ ಮರವಾಗಿದೆ. ಹಲಸಿನ ಆಕಾರದ, ಮುಷ್ಟಿ ಗಾತ್ರದ ಹೆಬ್ಬಲಸಿನ ಹೊರ ಮೈಯ ಮುಳ್ಳಿನ ಕವಚ ಬಿಡಿಸಿದರೆ ತೊಟ್ಟಿಗೆ ಅಂಟಿಕೊಂಡ ತೊಳೆಗಳ ಸಾಲು ಬಾಯಿಯಲ್ಲಿ ನೀರೂರಿಸುತ್ತವೆ.

–ದತ್ತಾತ್ರೇಯ ಭಟ್ಟ ಕಣ್ಣಿಪಾಲ, ಯಲ್ಲಾಪುರ



## ಅಪರೂಪದ ಶಿಲ್ಪ

ನೈಮಿಷಾರಣ್ಯವು ಭಾರತದ ಅತೀ ಪುರಾತನ ಧಾರ್ಮಿಕ ಕ್ಷೇತ್ರ. ಇಲ್ಲಿ ಲಲಿತಾದೇವಿಯ ಮೂಲ ಪ್ರಾಚೀನ ದೇವಾಲಯವಿದ್ದು, ಅದು 52 ಶಕ್ತಿಪೀಠಗಳಲ್ಲಿ ಒಂದೆನಿಸಿದೆ. ಈ ದೇವಾಲಯದ ಪಕ್ಕದಲ್ಲೇ ಕಾಮಕಾಮೇಶ್ವರಿ (ಮಂಗಳಗೌರಿ) ಮಾತೆಯ ಪ್ರಾಚೀನ ಮಂದಿರವಿದೆ. ಇಲ್ಲಿ ಶಿವ ಪಾರ್ವತಿಯನ್ನು ತೊಡೆಯ ಮೇಲೆ ಕೂರಿಸಿಕೊಂಡಿರುವ ಅಪರೂಪದ ಶಿಲ್ಪವಿದ್ದು, ಅದರ ಸುತ್ತಲೂ ಪರಿವಾರ ದೇವತೆಗಳು ಹಾಗೂ ಶಿವನ ಗಣಗಳನ್ನೂ ಕಾಣಬಹುದು. ಈ ಶಿಲ್ಪವು ಕಪ್ಪುಶಿಲೆಯದಾಗಿದ್ದು, ಕೆತ್ತನೆ ಮನಸೆಳೆಯುವಂತಿದೆ. ದೇವಾಲಯದ ಹೊರಗೂ ಲಜ್ಜಾಗೌರಿ ಮುಂತಾದ ಪ್ರಾಚೀನ ಶಿಲ್ಪಗಳಿವೆ.

–ಸೀತಾ ಎಸ್. ನಾರಾಯಣ, ಹರಿಹರ



## ಸತಿಯರ ಹಸ್ತಗಳ ಸ್ಮಾರಕ

ಪತಿಯ ಚಿತೆಗೆ ಪತ್ನಿ/ಉಪಪತ್ನಿಯರು ಬಿದ್ದು ತಮ್ಮ ಪ್ರಾಣ ಸಮರ್ಪಣೆ ಮಾಡುತ್ತಿದ್ದ 'ಸತಿ ಪದ್ಧತಿ' ಹಿಂದಿನ ಕಾಲದಲ್ಲಿ ಜಾರಿಯಲ್ಲಿತ್ತು. ಈ ನಿದರ್ಶನವನ್ನು ಸಾರಿ ಹೇಳುವ ಕೈ ಮುದ್ರೆಗಳ ರಚನೆಗಳನ್ನು ರಾಜಸ್ಥಾನದ ಜೋಧ್‌ಪುರದಲ್ಲಿರುವ ಮೆಹ್ರಾನ್‌ಗಢ ದ್ವಾರದಲ್ಲಿ ಈಗಲೂ ನೋಡಬಹುದು. ಇಲ್ಲಿರುವುದು ಮಹಾರಾಜ ಮಾನ್‌ಸಿಂಗ್ ತೀರಿಕೊಂಡಾಗ ಚಿತೆಗೆ ಹಾರಿ ಪ್ರಾಣವನ್ನು ತ್ಯಜಿಸಿದ ಆತನ ಸಂಗಾತಿಗಳ ಪ್ರತೀಕದ ಸತಿ ಹಸ್ತ ಸ್ಮಾರಕ.

–ವಿದ್ಯಾ ವಿ. ಹಾಲಭಾವಿ

